# ವ್ಯಷ್ಟಿ ಮತ್ತು ಸಮಷ್ಟಿ ಸಾಧನೆ

## ಮನೋಗತ

ಈಶ್ವರಪ್ರಾಪ್ತಿಗಾಗಿ ಪ್ರತಿದಿನ ಮಾಡಬೇಕಾದ ಪ್ರಯತ್ನಗಳಿಗೆ 'ಸಾಧನೆ' ಎನ್ನುತ್ತಾರೆ. ತಮ್ಮ ಆಧ್ಯಾತ್ಮಿಕ ಉನ್ನತಿಗಾಗಿ ಮಾಡಬೇಕಾದ ಪ್ರಯತ್ನಗಳಿಗೆ 'ವ್ಯಷ್ಟಿ ಸಾಧನೆ' ಮತ್ತು ಸಮಾಜದ ಆಧ್ಯಾತ್ಮಿಕ ಉನ್ನತಿಗಾಗಿ ಮಾಡಬೇಕಾದ ಪ್ರಯತ್ನಗಳಿಗೆ 'ಸಮಷ್ಟಿ ಸಾಧನೆ' ಎನ್ನುತ್ತಾರೆ. ಹೆಚ್ಚಿನ ಜನರು ಕೇವಲ ವ್ಯಷ್ಟಿ ಸಾಧನೆಯನ್ನು ಮಾಡುವವರೇ ಆಗಿರುತ್ತಾರೆ, ಅವರಿಗೆ ಸಮಷ್ಟಿ ಸಾಧನೆಯೆಂದು ಏನಾದರೂ ಮಾಡುವುದಿರುತ್ತದೆ ಎಂಬುದೇ ಗೊತ್ತಿರುವುದಿಲ್ಲ. ಸಾಧನೆಯಲ್ಲಿನ ಅಜ್ಞಾನ, ಯೋಗ್ಯ ಮಾರ್ಗದರ್ಶನದ ಕೊರತೆ ಮತ್ತು ಸಮಷ್ಟಿಗಾಗಿ ನಾವು ಮಾಡಬೇಕಾದ ಕರ್ತವ್ಯದ ಮರೆವು ಇತ್ಯಾದಿಗಳು ಇದಕ್ಕೆ ಕಾರಣವಾಗಿವೆ. ಈ ಗ್ರಂಥದಲ್ಲಿ ವ್ಯಷ್ಟಿ ಸಾಧನೆಯೊಂದಿಗೆ ಸಮಷ್ಟಿ ಸಾಧನೆಯನ್ನು ಮಾಡುವುದು ಏಕೆ ಅಗತ್ಯವಾಗಿದೆ ಎಂಬುದನ್ನು ಹೇಳಲಾಗಿದೆ.

ಪೃಥ್ವಿಯ ಮೇಲೆ ಧರ್ಮಸಂಸ್ಥಾಪನೆಯನ್ನು ಮಾಡುವುದು ಈಶ್ವರನ ಹಾಗೂ ಸಂತರ ಕಾರ್ಯವಾಗಿದೆ. ಈ ಕಾರ್ಯದಲ್ಲಿ ಕೈಜೋಡಿಸುವವರ ಮೇಲೆ ಅಂದರೆ ಸಮಷ್ಟಿ ಸಾಧನೆಯನ್ನು ಮಾಡುವವರ ಮೇಲೆ ಈಶ್ವರನ ಕೃಪೆಯು ವ್ಯಷ್ಟಿ ಸಾಧನೆಯನ್ನು ಮಾಡುವವರ ತುಲನೆಯಲ್ಲಿ ಜಾಸ್ತಿಯಿರುತ್ತದೆ. ಕೇವಲ ವ್ಯಷ್ಟಿ ಸಾಧನೆಯ ಬಲದ ಯಾರಾದರೊಬ್ಬರು ಮಹಾ, ಜನ, ತಪಗಳಂತಹ ಉಚ್ಚಲೋಕಕ್ಕೆ ಹೋಗಿದ್ದರೂ ಅವರ ಸಮಷ್ಟಿ ಸಾಧನೆಯು ಅಪೂರ್ಣವಾಗಿರುವುದರಿಂದ ಅಲ್ಲಿ ಅವರು ಸಮಷ್ಟಿ ಸಾಧನೆಯನ್ನು ಪ್ರಾರಂಭದಿಂದ ಮಾಡಲೇ ಬೇಕಾಗುತ್ತದೆ ಅಥವಾ ಪುನಃ ಪೃಥ್ವಿಯಲ್ಲಿ ಜನಿಸಿ ಸಮಷ್ಟಿ ಸಾಧನೆಯನ್ನು ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಮೋಕ್ಷಪ್ರಾಪ್ತಿಯಾಗುವುದಿಲ್ಲ. ಇದಕ್ಕೆ ವಿರುದ್ಧವಾಗಿ ವ್ಯಷ್ಟಿ ಸಹಿತ ಸಮಷ್ಟಿ ಸಾಧನೆಯನ್ನು ಮಾಡುವವರು ಯಾವ ಲೋಕಕ್ಕೆ ಹೋದರೂ ಅಲ್ಲಿಂದ ಅವರು ಶೀಘ್ರ ಮತ್ತು ನೇರವಾಗಿ ಮೋಕ್ಷದವರೆಗೆ ತಲುಪಬಹುದು. ಸಾಧನೆಯಲ್ಲಿ ಒಂದು ಮಹತ್ವದ ಸಿದ್ಧಾಂತವಿದೆ; ಅದೇನೆಂದರೆ ಕಾಲಾನುಸಾರ ಸಾಧನೆ. ಪ್ರಸ್ತುತ ಕಾಲಾನುಸಾರ ವ್ಯಷ್ಟಿ ಸಾಧನೆಗೆ ಕೇವಲ ಶೇ. 30 ರಷ್ಟು ಮತ್ತು ಸಮಷ್ಟಿ ಸಾಧನೆಗೆ ಶೇ. 70 ರಷ್ಟು ಮಹತ್ವವಿದೆ.

ಈ ಗ್ರಂಥದಲ್ಲಿ ವ್ಯಷ್ಟಿ ಸಾಧನೆಯಿಂದ ಸಾತ್ತ್ವಿಕತೆಯನ್ನು ಹೆಚ್ಚಿಸುವ ಉಪಾಯಗಳು; ಭಕ್ತಿಯೋಗ, ಜ್ಞಾನಯೋಗ ಮತ್ತು ಕರ್ಮಯೋಗಗಳನುಸಾರ ಮಾಡಬೇಕಾದ ಸಾಧನೆ; ಈಶ್ವರಪ್ರಾಪ್ತಿಗಾಗಿ ತಳಮಳ, ಪ್ರಾರ್ಥನೆ ಮತ್ತು ಕೃತಜ್ಞತೆಗಳ ಮಹತ್ವ; ನಾಮ, ಸೇವೆ, ತ್ಯಾಗ ಮುಂತಾದ ವ್ಯಷ್ಟಿ ಸಾಧನೆಯ ಹಂತಗಳು ಮುಂತಾದವುಗಳ ವಿಷಯದಲ್ಲಿ ಮಾಹಿತಿಯನ್ನು ನೀಡಲಾಗಿದೆ. ಸಮಷ್ಟಿ ಸಾಧನೆಯ ಮಹತ್ವ ಮತ್ತು ಲಾಭಗಳು; ರಾಷ್ಟ್ರ ಮತ್ತು ಧರ್ಮದ ರಕ್ಷಣೆಯ ಕಾರ್ಯವೆಂದರೆ ಈಶ್ವರಪ್ರಾಪ್ತಿಯಲ್ಲಿನ ಒಂದು ಮಹತ್ವದ ಹಂತವಾಗಿದೆ; ಕೇವಲ ಸಮಷ್ಟಿ ಸಾಧನೆಯ ಬಲದಿಂದ ಕೆಟ್ಟ ಶಕ್ತಿಗಳೊಂದಿಗೆ ಹೋರಾಡಲು ಬರುತ್ತದೆ ಇತ್ಯಾದಿ ವಿಷಯಗಳ ಮಾಹಿತಿಯನ್ನು ನೀಡಲಾಗಿದೆ. ಅದರೊಂದಿಗೆ ವ್ಯಷ್ಟಿ ಮತ್ತು ಸಮಷ್ಟಿ ಸಾಧನೆಯಲ್ಲಿನ ಧರ್ಮಾಚರಣೆಯ ಹಂತಗಳು; ವ್ಯಷ್ಟಿ ಮತ್ತು ಸಮಷ್ಟಿ ಸಾಧನೆಯನ್ನು ಮಾಡುವ ಉನ್ನತರು; ವ್ಯಷ್ಟಿ ಮತ್ತು ಸಮಷ್ಟಿ ಸಾಧನೆಯನ್ನು ಮಾಡುವಾಗ ಕೆಟ್ಟ ಶಕ್ತಿಗಳಿಂದಾಗುವ

ತೊಂದರೆಗಳು ಇತ್ಯಾದಿ ವಿಷಯಗಳನ್ನು ನೀಡಲಾಗಿದೆ.

ಈ ಗ್ರಂಥದಲ್ಲಿನ ಜ್ಞಾನವು ಸಾಧಕರಿಗೆ ಈಶ್ವರನ ಕೃಪೆಯಿಂದ ದೊರಕಿರುವುದರಿಂದ ಮತ್ತು ಜ್ಞಾನವು ಸ್ವಲ್ಪ ಕಠಿಣವಾಗಿರುವುದರಿಂದ ಸಾಮಾನ್ಯಜನರಿಗೆ ಅರ್ಥಮಾಡಿಕೊಳ್ಳಲು ಸ್ವಲ್ಪ ಕಷ್ಟವಾಗಬಹುದು. ಹೀಗಿದ್ದರೂ ಸಹ ಜಿಜ್ಞಾಸೆ ಮತ್ತು ತಳಮಳವಿದ್ದರೆ ಸಾಧಕರು ಅದನ್ನು ತಿಳಿದುಕೊಳ್ಳಬಹುದು.

ಗ್ರಂಥದಲ್ಲಿ ಬಹಳಷ್ಟು ಕಡೆಗಳಲ್ಲಿ 'ಪ. ಪೂ. ಡಾಕ್ಟರರು' ಎಂದು ಉಲ್ಲೇಖಿಸಲಾಗಿದೆ. ಅದು ಗ್ರಂಥವನ್ನು ಸಂಕಲನ ಮಾಡಿದವರಲ್ಲಿ ಒಬ್ಬರಾದ 'ಡಾ. ಜಯಂತ ಬಾಳಾಜಿ ಆಠವಲೆ' ಇವರ ಕುರಿತಾಗಿದೆ.

ಈ ಗ್ರಂಥದಲ್ಲಿರುವ ಜ್ಞಾನದಿಂದ ಎಲ್ಲರಿಗೂ ಹೆಚ್ಚೆಚ್ಚು ಸಾಧನೆಯನ್ನು ಮಾಡಲು ಪ್ರೇರಣೆ ಸಿಗಲಿ ಮತ್ತು ಮುಂದೆ ಅವರ ಸಾಧನೆಯು ವೃದ್ಧಿಯಾಗಿ ಈಶ್ವರಪ್ರಾಪ್ತಿಯಾಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ - ಸಂಕಲನಕಾರರು.

---

**ವಿಶೇಷ ಟಿಪ್ಪಣಿ :** ಸಾಧಕರಿಗೆ ಈಶ್ವರನ ಕೃಪೆಯಿಂದ ಸಿಗುವ ಜ್ಞಾನದ ಪ್ರಕ್ರಿಯೆಯ ವೇಗವು ಪ್ರಚಂಡವಾಗಿರುವುದರಿಂದ ಹಾಗೂ ಅಸುರೀ ಶಕ್ತಿಗಳು ಜ್ಞಾನಪ್ರಾಪ್ತಿಯ ಕಾರ್ಯದಲ್ಲಿ ಅಡಚಣೆಗಳನ್ನು ತಂದೊಡ್ಡಿ ತಪ್ಪು ಮಾಹಿತಿಯನ್ನು ನೀಡುವ ಸಾಧ್ಯತೆಗಳು ಇರುವುದರಿಂದ ಸಾಧಕರಿಂದ ಜ್ಞಾನ ಗ್ರಹಣ ಮಾಡುವಾಗ ಯಾವುದಾದರೂ ಚಿಕ್ಕಪುಟ್ಟ ತಪ್ಪುಗಳಾಗುವ ಸಾಧ್ಯತೆಗಳಿರುತ್ತವೆ. ಆದುದರಿಂದ ಅವರಿಗೆ ಜ್ಞಾನದಿಂದ ಸಿಕ್ಕಿರುವ ಮಾಹಿತಿ ಮತ್ತು ಧರ್ಮಶಾಸ್ತ್ರದಲ್ಲಿ ನೀಡಿರುವ ಮಾಹಿತಿಯಲ್ಲಿ ವ್ಯತ್ಯಾಸವಿರುವ ಸಾಧ್ಯತೆಯಿದೆ. ನಾವು ಧರ್ಮಶಾಸ್ತ್ರವನ್ನೇ ಪ್ರಮಾಣವೆಂದು ಒಪ್ಪುತ್ತಿರುವುದರಿಂದ ವಾಚಕರು ಇಂತಹ ವ್ಯತ್ಯಾಸವಿರುವ ಮಾಹಿತಿಗಳು ಕಂಡುಬಂದಲ್ಲಿ ನಮ್ಮ ಗಮನಕ್ಕೆ ತಂದುಕೊಡಬೇಕು ಎಂದು ವಿನಂತಿಸುತ್ತೇವೆ. ಗ್ರಂಥದ ಮುಂದಿನ ಆವೃತ್ತಿಯಲ್ಲಿ ಈ ಬಗ್ಗೆ ಯೋಗ್ಯ ಸುಧಾರಣೆಯನ್ನು ಮಾಡಿಕೊಳ್ಳಬಹುದು - **ಪ್ರಕಾಶಕರು.**

# ಅನುಕ್ರಮಣಿಕೆ


1. ಸಾಧನೆ : ವ್ಯಾಖ್ಯೆ ಮತ್ತು ಪ್ರಕಾರಗಳು 9

2. ವ್ಯಷ್ಟಿ ಸಾಧನೆ 9

2 ಅ. ಈಶ್ವರನೊಂದಿಗೆ ಏಕರೂಪವಾಗುವ ಧ್ಯೇಯವು ‘ಸ್ವಭಾವದೋಷ-ನಿರ್ಮೂಲನೆಯ’ ಪ್ರಕ್ರಿಯೆಯಿಂದ ಬೇಗನೇ ಸಾಧ್ಯವಾಗುತ್ತದೆ 9

2 ಆ. ಶರೀರವನ್ನು ಪವಿತ್ರ ಮತ್ತು ಆರೋಗ್ಯವಾಗಿಡಲು ಮಾಡಬೇಕಾದ ಉಪಾಯಗಳು 9

2 ಇ. ಸಾತ್ತ್ವಿಕತೆಯನ್ನು ಹೆಚ್ಚಿಸುವುದು 10

2 ಈ. ವಿವಿಧ ದೇಹಗಳ ಶುದ್ಧತೆಯನ್ನು ಮಾಡುವ ಉಪಾಯ 11

2 ಎ. ಕರ್ಮಯೋಗ 12

2 ಏ. ಭಕ್ತಿಯೋಗ 13

2 ಐ. ನಾಮಸಂಕೀರ್ತನಯೋಗ 16

2 ಒ. ಸತ್ಸಂಗ 17

2 ಓ. ಸತ್ಸೇವೆ 17

2 ಔ. ತ್ಯಾಗ 21

2 ಅಂ. ಪ್ರೀತಿ 21

2 ಕ. ಅಹಂ-ನಿರ್ಮೂಲನೆ 22

2 ಖ. ಸೂಕ್ಷ್ಮದಿಂದ ಜ್ಞಾನವನ್ನು ಪಡೆದುಕೊಳ್ಳುವುದು 27

2 ಗ. ಸಾಧನೆಗೆ ಸಂಬಂಧಿಸಿದ ಇತರ ಘಟಕಗಳು 30

2 ಘ. ವಿವಿಧ ಸಾಧನೆಯ ಪ್ರಕಾರಗಳ ತುಲನೆ 32

3. ಸಮಷ್ಟಿ ಸಾಧನೆ 34

3 ಅ. ಸಮಷ್ಟಿ ಸಾಧನೆಯ ಮಹತ್ವ 34

3 ಆ. ಸಾಕ್ಷೀಭಾವ ಮತ್ತು ಸಮಷ್ಟಿಭಾವ ಇರುವ ಸಾಧಕರು 35

3 ಈ. ಸಮಷ್ಟಿ ಸಾಧನೆಯಲ್ಲಿ ಬರುವ ವಿಷಯಗಳು 37

3 ಉ. ಇತರರ ತಪ್ಪುಗಳನ್ನು ಹೇಳುವುದು 38

3 ಊ. ಸಮಷ್ಟಿ ಸಾಧನೆಯನ್ನು ಮಾಡುವುದರಿಂದಾಗುವ ಲಾಭಗಳು 39

3 ಎ. ಸಮಷ್ಟಿ ಸಾಧನೆಯನ್ನು ಮಾಡುವವರಿಗಾಗಿ ಈಶ್ವರನು ತಾನಾಗಿಯೇ ಸಹಾಯಕ್ಕಾಗಿ ಬರುವುದು 39

3 ಏ. ಸನಾತನದ ಸಾಧಕರು ಸಮಷ್ಟಿ ಸಾಧನೆಯನ್ನು ಮಾಡುತ್ತಿರುವುದರಿಂದ, ಇತರ ಸಂಪ್ರದಾಯದವರ ತುಲನೆಯಲ್ಲಿ ಅಸುರೀ ಶಕ್ತಿಗಳ ತೊಂದರೆಯು ಹೆಚ್ಚಿಗೆ ಇರುವುದು 40
3 ಒ. ಸಮಷ್ಟಿ ಸಾಧನೆಯಿಂದ ಮಾಂತ್ರಿಕರೊಂದಿಗೆ ಹೇಗೆ ಹೋರಾಡಬೇಕು ಎಂಬುದನ್ನು ಭೂಲೋಕದಲ್ಲಿಯೇ ಕಲಿತಿರುವುದರಿಂದ ಮೃತ್ಯುವಿನ ನಂತರ ಮುಂದಿನ ಲೋಕಕ್ಕೆ ಪ್ರಯಾಣ ಮಾಡಲು ಸಾಧ್ಯವಾಗುವುದು 41
3 ಓ. ಈಶ್ವರನು ಸಮಷ್ಟಿ ಸಾಧನೆ ಮಾಡುವ ಜೀವಗಳಿಗೆ ಯೋಗ್ಯ ಕೃತಿ ಮಾಡುವ ವಿಚಾರಗಳನ್ನು ಕೊಟ್ಟು ಅವರಿಗೆ ಬಾಹ್ಯ ವಾಯುಮಂಡಲ-ದಿಂದಾಗುವ ಹಲ್ಲೆಗಳಿಂದ ರಕ್ಷಣೆ ಮಾಡುವುದು 41
3 ಔ. ಈಶ್ವರೀ ರಾಜ್ಯದ ಸ್ಥಾಪನೆಯ ನಂತರ ಜೀವಗಳ ಸಾಧನೆಯು ಪೂರ್ಣವಾಗುವುದು ಮತ್ತು ಆಗ ಮಾಯೆಯ ಮೇಲೆ ಧರ್ಮದ, ಅಂದರೆ ಈಶ್ವರನ ತೇಜವು ಪ್ರಕ್ಷೇಪಿತವಾಗಿ ಅಸುರರು ಕೆಲವು ಸಮಯ ಸುಪ್ತಾವಸ್ಥೆಗೆ ಹೋಗುವುದು 42
3 ಕ. ಶೀಘ್ರ ಮೋಕ್ಷಪ್ರಾಪ್ತಿಯಾಗಬೇಕಾದರೆ ಸಮಷ್ಟಿ ಸಾಧನೆಗೆ ಪರ್ಯಾಯವಿಲ್ಲ 42
3 ಖ. ಸಮಷ್ಟಿ ಸಾಧನೆಯನ್ನು ಮಾಡುವಾಗ ಸಮಷ್ಟಿಗೆ ಹಾನಿಯನ್ನುಂಟು ಮಾಡುವವರಿಗೆ ಅವರ ಪಾಪಗಳಿನುಸಾರ ನರಕ ಪ್ರಾಪ್ತಿಯಾಗುತ್ತದೆ 42
3 ಗ. ಡಾ. ಜಯಂತ ಆಠವಲೆಯವರ (ಸಂಕಲನಕಾರರು) ಸಮಷ್ಟಿ ಸಾಧನೆ 42
4. ವ್ಯಷ್ಟಿ ಮತ್ತು ಸಮಷ್ಟಿ ಸಾಧನೆ 44
4 ಅ. ಸರ್ವಸಾಧಾರಣ ಮಾಹಿತಿ 44
4 ಆ. ಕರ್ಮಯೋಗ ಹಾಗೂ ವ್ಯಷ್ಟಿ ಮತ್ತು ಸಮಷ್ಟಿ ಸಾಧನೆ 55
4 ಇ. ಜ್ಞಾನಯೋಗ ಹಾಗೂ ವ್ಯಷ್ಟಿ ಮತ್ತು ಸಮಷ್ಟಿ ಸಾಧನೆ 56
4 ಈ. ಭಕ್ತಿಯೋಗ ಹಾಗೂ ವ್ಯಷ್ಟಿ ಮತ್ತು ಸಮಷ್ಟಿ ಸಾಧನೆ 57
4 ಉ. ವ್ಯಷ್ಟಿ ಮತ್ತು ಸಮಷ್ಟಿ ಸಾಧನೆಯಲ್ಲಿನ ಧರ್ಮಾಚರಣೆಯ ಹಂತ 58
4 ಊ. ಆಧ್ಯಾತ್ಮಿಕ ಉನ್ನತಿ 59
4 ಎ. ವ್ಯಷ್ಟಿ ಮತ್ತು ಸಮಷ್ಟಿ ಸಾಧನೆ ಮಾಡುವವರಿಗಿಂತ ಈಶ್ವರೀ ರಾಜ್ಯದ ಸ್ಥಾಪನೆಯನ್ನು ಮಾಡಲು ಸಾಧನೆಯನ್ನು ಮಾಡುವವರಿಗೆ ಹೆಚ್ಚಿನ ಮಹತ್ವವಿರುವುದು 61
4 ಏ. ವ್ಯಷ್ಟಿ ಮತ್ತು ಸಮಷ್ಟಿ ಸಾಧನೆ ಮಾಡುವ ಉನ್ನತರು 62
4 ಐ. ವ್ಯಷ್ಟಿ ಸಾಧನೆ ಮಾಡುವ ಉನ್ನತರು ಮತ್ತು ಸಮಷ್ಟಿ ಸಾಧನೆ ಮಾಡುವ ಡಾ. ಜಯಂತ ಆಠವಲೆಯವರ (ಸಂಕಲನಕಾರರು) ಕಾರ್ಯ 65
4 ಒ. ವ್ಯಷ್ಟಿ ಮತ್ತು ಸಮಷ್ಟಿ ಸಾಧನೆ ಹಾಗೂ ಕೆಟ್ಟ ಶಕ್ತಿಗಳ ತೊಂದರೆ 66
4 ಓ. ವ್ಯಷ್ಟಿ ಮತ್ತು ಸಮಷ್ಟಿ ಸಾಧನೆ ಹಾಗೂ ಮೃತ್ಯುನಂತರದ ಸ್ಥಿತಿ 69